**ಓ.ಎಸ್. ನಂಃ 260/2020**

**ಡಿ.ಡಬ್ಲ್ಯೂಃ 2**

**ದಿನಾಂಕ 24.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಬಿ.ಕೆ.ಪಿ.ವಕೀಲರಿಂದಃ**

1. 1 ನೇ ಪ್ರತಿವಾದಿ ನನ್ನ ಸಂಬಂಧಿಕನಲ್ಲ. ನನಗೆ ವಾದಿಯ ಪರಿಚಯ ಇದೆ. ವಾದಿ ನನ್ನ ಗ್ರಾಮಸ್ಥರು. ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಪೂರ್ವಕ್ಕೆ ಸಿಂಗಾಚಾರಿ ಮತ್ತು ಸುಬ್ಬಾಚಾರಿ ರವರ ಮನೆ ಇದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮಕ್ಕೆ-ಗಲ್ಲಿ ಹಾಗೂ ಸ್ವಾಮಿನಾಯಕ ಮತ್ತು ರಾಮಕೃಷ್ಣೇಗೌಡರ ನಿವೇಶನ ಇದೆ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ-ಗಲ್ಲಿ ಮತ್ತು ರಸ್ತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ದಕ್ಷಿಣಕೆ ರಸ್ತೆ ಇದೆ ಎಂದು ನುಡಿದಿರುತ್ತಾರೆ.

2. 1 ನೇ ಪ್ರತಿವಾದಿಯ ಖಾಲಿ ನಿವೇಶನದ ಸುತ್ತ ಮುತ್ತಲು ನನಗೆ ಸೇರಿದ ಯಾವುದೇ ನಿವೇಶನ ಇಲ್ಲ. ಪೂರ್ವ-ಪಶ್ಚಿಮ 19 ಅಡಿ ಹಾಗೂ ಉತ್ತರ ದಕ್ಷಿಣ 40 ಅಡಿ ಜಾಗ ಇರುವ ಬಗ್ಗೆ ಕ್ರಯ ಪತ್ರವನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಸೋಮಚಾರಿರವರ ಮನೆ ಇದ್ದು, ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪ್ರಕಾಶಚಾರಿರವರ ಮನೆ ಇದೆ ಎಂದರೆ ಸರಿ. 1 ನೇ ಪ್ರತಿವಾದಿಯ ನೆಲಸಮ ಮಾಡಿದ ಮನೆಯಿಂದ ದಾವಾ ಆಸ್ತಿಗೆ ಎಷ್ಟು ಅಡಿ ಅಂತರವಿದೆ ಎಂದು ನನಗೆ ಗೊತ್ತಿಲ್ಲ. ನಿಪಿ.20 ರಲ್ಲಿ ಇರುವ ಹಸಿರು ಬಣ್ಣದ ಮನೆಯ ಪಕ್ಕದಲ್ಲಿ ಬಿದ್ದು ಹೋಗಿರುವ ಗೋಡೆಯ ಭಾಗವು 1 ನೇ ಪ್ರತಿವಾದಿಗೆ ಸೇರಿರುತ್ತದೆ. ನಿಪಿ.20 ರಲ್ಲಿ ಇರುವ ಹಸಿರು ಬಣ್ಣದ ಮನೆಯ ಮುಂದೆ ರಸ್ತೆ ಇದೆ ಎಂದರೆ ಸರಿಯಲ್ಲ.

3. ನಿಪಿ.19 ರ ಪೋಟೋದಲ್ಲಿ ಕಾಣುತ್ತಿರುವ ಮಂಗಳೂರು ಹಂಚಿನ ಮನೆಯ ಪಕ್ಕದಲ್ಲಿ ಗಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಯ ಹಿಂಬದಿಯಲ್ಲಿರುವ 6 ಅಡಿ ಖಾಲಿ ಜಾಗ ವಾದಿಗೆ ಸೇರಿರುವ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಹಿಂಬದಿಯಲ್ಲಿರುವ 6 ಅಡಿ ಖಾಲಿ ಜಾಗವು ನನ್ನ ಮನೆಯ ಪಕ್ಕದಲ್ಲಿರುವ ನೀರಿನ

ಟ್ಯಾಂಕ್ ಬಳಿ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಹಿಂಬದಿಯಲ್ಲಿರುವ ವಾದಿಗೆ ಸೇರಿದ 6 ಅಡಿ ಖಾಲಿ ಜಾಗವನ್ನು ನಿವೇಶನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯನ್ನು ಮತ್ತು 1 ನೇ ಪ್ರತಿವಾದಿಯ ಖಾಲಿ ನಿವೇಶನವನ್ನು ಪಂಚಾಯಿತಿಯವರು ಬಂದು ಅಳತೆ ಮಾಡಿರುತ್ತಾರೆ. ದಾವಾ ಆಸ್ತಿಯ ಹಿಂಬದಿಯಲ್ಲಿ ರಸ್ತೆ ಇದೆ ಪಂಚಾಯಿತಿಯವರು ಹೇಳಿದರು ಸಹ ಪ್ರತಿವಾದಿಯರು ಸದರಿ ರಸ್ತೆಯಲ್ಲಿ ವಾದಿಗೆ ತಿರುಗಾಡಲು ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. 6 ಅಡಿ ಖಾಲಿ ನಿವೇಶನವು 1 ನೇ ಪ್ರತಿವಾದಿಗೆ ಅವರ ಹಿರಿಯರಿಂದ ಬಂದಿರುವ ಕಾರಣ ಅದಕ್ಕೆ ಸಂಬಂಧಿಸಿದ ಯಾವುದೇ ಕ್ರಯ ಪತ್ರ 1 ನೇ ಪ್ರತಿವಾದಿ ಬಳಿ ಇಲ್ಲ. ಸದಿರಿ 6 ಅಡಿ ಖಾಲಿ ನಿವೇಶನ ವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**